(ಇ) ಪ್ರಗತಿಯಲ್ಲಿರುವ ವಿಚಾರಣೆಗಳನ್ನು ಸಂಪೂರ್ಣಗೊಳಿಸಿ, ವಿಚಾರಣಾಧಿಕಾರಿಗಳ ವರದಿಯನುಸಾರ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಅಲ್ಪಸಂಖ್ಯಾತರ ರೆಸಿಡೆನ್ಸಿಯಲ್ ಶಾಲೆಗಳು

1627 (1950) : ಶ್ರೀ ಹೊನ್ನಳ್ಳಿ ಜಬ್ಬಾರ್‌ಖಾನ್ ಹೈಯತ್‌ಖಾನ್ (ಹುಬ್ಬಳ್ಳಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ರಾಜ್ಯದಲ್ಲಿ ಅಲ್ಪಸಂಖ್ಯಾತರ ರೆಸಿಡೆನ್ಸಿಯಲ್ ಶಾಲೆಗಳ ಸಂಖ್ಯೆ ಎಷ್ಟು; ಜಿಲ್ಲಾವಾರು ವಿವರ ನೀಡುವುದು;

(ಆ) 1998-99ನೇ ಸಾಲಿನಲ್ಲಿ ಈ ಶಾಲೆಗಳಿಗೆ ಮಂಜೂರು ಮಾಡಿದ ಮತ್ತು ಬಿಡುಗಡೆ ಮಾಡಿದ ಅನುದಾನವೆಷ್ಟು;

(ಇ) ಈ ಶಾಲೆಗಳು ಮಂಜೂರು ಮಾಡಿದ ಹಣವನ್ನು ಸಂಪೂರ್ಣವಾಗಿ ಬಳಸಿಕೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

(ಅ) ಅಲ್ಪಸಂಖ್ಯಾತರ ಇಲಾಖೆಯಡಿ ವಸತಿಶಾಲೆ ಹಾಲಿ ಯಾವುದು ಇರುವುದಿಲ್ಲ. ಆದರೆ 99-2000ನೇ ಸಾಲಿನಲ್ಲಿ ಈ ಕೆಳಕಂಡ 4 ಸ್ಥಳಗಳಲ್ಲಿ ಅಲ್ಪಸಂಖ್ಯಾತರಿಗೆ 4 ಮೊರಾರ್ಜಿದೇಸಾಯಿ ವಸತಿ ಶಾಲೆಗಳನ್ನು ಪ್ರಾರಂಭಿಸಲು ಮಂಜೂರಾತಿ ನೀಡಲಾಗಿದ್ದು, ಅವುಗಳನ್ನು 2000-2001ನೇ ಶೈಕ್ಷಣಿಕ ವರ್ಷದಿಂದ ಆರಂಭಿಸಲಾಗುವುದು:-

1.	ಶಿವಮೊಗ್ಗ	ಶಿವಮೊಗ್ಗ ಜಿಲ್ಲೆ.
2.	ಬೆಳಗಾಂ	ಬೆಳಗಾಂ ಜಿಲ್ಲೆ.
3.	ಬಳ್ಳಾರಿ	ಬಳ್ಳಾರಿ ಜಿಲ್ಲೆ.
4.	ಹುಬ್ಬಳ್ಳಿ	ಧಾರವಾಡ ಜಿಲ್ಲೆ.

(ಆ) ಉದ್ಭವಿಸುವುದಿಲ್ಲ.

(ಇ) 99-2000ನೇ ಸಾಲಿನಲ್ಲಿ ಈ ವಸತಿ ಶಾಲೆಗಳು ಡಿಸೆಂಬರ್ ಮಾಹೆಯಲ್ಲಿ ಮಂಜೂರಾದ ಪ್ರಯುಕ್ತ ಇವುಗಳನ್ನು ಪ್ರಾರಂಭಿಸಿಲ್ಲ. ಆದ್ದರಿಂದ ಒದಗಿಸಲಾದ ಆಯವ್ಯಯ ರೂ. 60 ಲಕ್ಷ ಬಿಡುಗಡೆಯಾಗಿರುವುದಿಲ್ಲ. ಇವುಗಳನ್ನು ಪ್ರಾರಂಭಿಸಲು ಪೂರ್ವ ಸಿದ್ಧತೆಗಳನ್ನು ನಡೆಸಿದ್ದು, 2000-2001ರ ಶೈಕ್ಷಣಿಕ ಸಾಲಿನಲ್ಲಿ ಪ್ರಾರಂಭಿಸಲಾಗುವುದು.